ತಾರಕಾ ಜಲಾಶಯದ ಯೋಜನೆ

೧೦೦೧. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ತಾರಕಾ ಜಲಾಶಯ ಯೋಜನೆಯ ಮೂಲ ಅಂದಾಜು ಎಷ್ಟು?

ಆ) ಸದರಿ ಯೋಜನೆಯಿಂದ ನೀರು ಪಡೆಯಲು ಉದ್ದೇಶಿಸಿದ ನೀರಾವರಿ ಪ್ರದೇಶ ಎಷ್ಟು?

ಇ) ಸದರಿ ಉದ್ದೇಶಿತ ಪ್ರದೇಶಕ್ಕೆ ಪೂರ್ಣ ಪ್ರಮಾಣದ ನೀರನ್ನು ಒದಗಿಸಲಾಗಿದೆಯೆ ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಹಾಗೂ ಯಾವಾಗ ಒದಗಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೭೦ ಲಕ್ಷ ರೂಪಾಯಿಗಳು.

ಆ) ೪,೮೫೬ ಹೆಕ್ಟೇರ್ (೧೨,೦೦೦ ಎಕರೆಗಳು).

ಇ) ಮೂಲ ಅಂದಾಜಿನಲ್ಲಿ ಉದ್ದೇಶಿಸಲಾಗಿದ್ದ ಪೂರ್ಣ ಪ್ರಮಾಣದ ಆಚ್ಚುಕಟ್ಟಿಗೆ ನೀರನ್ನು ಒದಗಿಸಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮೊದಲು ಸುಮಾರು ೧೨ ಸಾವಿರ ಎಕರೆ ಗಳಿಗೆ ಮಾತ್ರ ನೀರು ಕೊಡಬೇಕೆನ್ನುವ ಒಂದು ಅಂದಾಜು ಇಟ್ಟುಕೊಂಡಿದ್ದೆವು. ಆದರೆ ಈಗ ಆ ಅಂದಾಜನ್ನು ರಿವೈಜ್ ಮಾಡಿ ಸುಮಾರು ೨೨ ಸಾವಿರ ಎಕರೆಗಳಿಗೆ ನೀರನ್ನು ಒದಗಿಸಿಕೊಡುವ ಒಂದು ಯೋಜನೆಯನ್ನು ಮಾಡಿದ್ದೇವೆ. ಹಿಂದಿನ ಒಂದು ಅಂದಾಜಿನ ಪ್ರಕಾರ ೩.೧೨ ಟಿ.ಎಂ.ಸಿ. ನೀರು ಬೇಕಾಗಿತ್ತು. ಆದರೆ ಈಗ ಹೆಚ್ಚು ನೀರು ಬೇಕಾಗುತ್ತದೆ. ಅಷ್ಟು ಪ್ರಮಾಣದ ನೀರು ಅಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ, ಮತ್ತು ೬ ಲಕ್ಷ ರೂಪಾಯಿಗಳ ಅಂದಾಜಿ ನಲ್ಲಿ ಒಂದು ಅಣೆಕಟ್ಟು ಕಟ್ಟುವ ಯೋಜನೆ ಕೂಡ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಎಂ. ಶಿವಣ್ಣ.—ಸನ್ಮಾನ್ಯ ಅಧ್ಯಕ್ಷರೇ ೧೯೬೦ನೇ ಇಸವಿಯಲ್ಲಿ ಒಂದು ಅಣೆಕಟ್ಟನ್ನು ಅಲ್ಲಿ ಸ್ಥಾಪನೆ ಮಾಡಿದರು. ಆದರೆ ಆ ಅಣೆಕಟ್ಟಿನಿಂದ ನಮ್ಮ ತಾಲ್ಲೂಕಿಗೆ ಯಾವುದೇ ರೀತಿಯ ಅನುಕೂಲ ವಾಗುತ್ತಿಲ್ಲ. ಅಣೆಕಟ್ಟಿನಿಂದ ಪಕ್ಕದ ತಾಲ್ಲೂಕುಗಳಿಗೆ ಮಾತ್ರ ಹೆಚ್ಚಿನ ಅನುಕೂಲವಾಗುತ್ತಿದೆ. ನಮ್ಮಲ್ಲಿ ಮಂಚಿಕ್ಯವಾಗಿ ಎರಡು ಅಣೆಕಟ್ಟುಗಳು ಇವೆ. ಒಂದು ಕಬಿನಿ ಎರಡನೆಯದು ನಂಗು. ಆದರೂ ಕೂಡ ನಮ್ಮ ತಾಲ್ಲೂಕಿಗೆ ಯಾವ ಪ್ರಯೋಜನವಿಲ್ಲ. ನನಗೆ ತಿಳಿದ ಮಟ್ಟಿಗೆ ಕಬಿನಿ ಜಲಾಶಯದಲ್ಲಿ ಹೆಚ್ಚು ನೀರು ಇದೆ. ಅಲ್ಲಿಗೆ ಸಮೀಪದ ತಾರಕದಲ್ಲಿ ಲಿಫ್ಟ್ ಇರಿಗೇಷನ್ ಮಾಡಲು ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತಾರೆಯೇ? ಮತ್ತು ಮಾನ್ಯ ಮಂತ್ರಿಗಳು ಮಾತನಾಡುತ್ತಾ ಹೇಳಿದರು ಸುಮಾರು ೨೨ ಸಾವಿರ ಎಕರೆಗಳಿಗೆ ನೀರಾವರಿಯನ್ನು ಕೊಡಲು ಅಂದಾಜು ಮಾಡಿದ್ದೇವೆಂದು. ಆದರೆ ಕಬಿನಿ ಜಲಾಶಯದಲ್ಲಿ ಹೆಚ್ಚು ನೀರು ಇದೆ. ಅದನ್ನು ಉಪಯೋಗಿಸಿಕೊಂಡು ನೀರಾವರಿ ಸೌಕರ್ಯವನ್ನು ಒದಗಿಸಿಕೊಡುತ್ತಾರೆಯೇ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸ್ವಲ್ಪ ಮಟ್ಟಿಗೆ ವಾಸ್ತವಾಂಶವಿದೆ. ಡ್ಯಾಮ್ ಸೈಟ್‌ನಲ್ಲಿ ಎಷ್ಟು ನೀರು ಸಿಗುತ್ತದೆ ಎಂಬುದನ್ನು ನಾವು ಮೊದಲು ಪರಿಶೀಲನೆ ಮಾಡಬೇಕಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ಸುಮಾರು ೩.೧೨ ಟಿ.ಎಂ.ಸಿ ನೀರು ನಮಗೆ ಬೇಕಾಗುತ್ತದೆ. ಮತ್ತು ಕಬಿನಿಯಲ್ಲಿ ಇರತಕ್ಕಂಥ ನೀರನ್ನು ಉಪಯೋಗಿಸಿ ಕೊಂಡು ಲಿಫ್ಟ್ ಇರಿಗೇಷನ್ ಮಾಡಿಸುವಂತೆ ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ.

ಕಡೂರು ತಾಲ್ಲೂಕಿನ ಪಂಚನಹಳ್ಳಿಯಲ್ಲಿ ಪೆಟ್ರಿಕ್ ನಂತರದ ವಿದ್ಯಾರ್ಥಿನಿಲಯವನ್ನು ತೆರೆಯುವುದು

೯೦೩. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲೂಕು ಪಂಚನ ಹಳ್ಳಿಯಲ್ಲಿರುವ ಸರಕಾರಿ ಕಿರಿಯ ಕಾಲೇಜಿಗೆ ಗ್ರಾಮಾಂತರ ಪ್ರದೇಶದಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರ ಜೊತೆಗೆ ಅಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯವನ್ನು ತೆರೆಯುವಂ ಸಂಬಂಧಪಟ್ಟ ಅಧಿಕಾರಿಗಳಿಂದ ಶಿಫಾರಸ್ಸು ಆಗಿದ್ದರೂ ಇದುವರೆ ವಿಗೂ ತೆರೆಯದಿರಲು ಕಾರಣವೇನು?

ಆ) ಹಾಗಿದ್ದಲ್ಲಿ, ಶೀಘ್ರವಾಗಿ ವಿದ್ಯಾರ್ಥಿನಿಲಯವನ್ನು ಸರಕಾರದವರು ಮಂಜೂರು ಮಾಡುವರೇ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಸಧ್ಯಕ್ಕೆ ಹೊಸ ಮೆಟ್ರಿಕ್ ನಂತರದ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಕಾರ್ಯಕ್ರಮ ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಬಿ. ಓಂಕಾರಮೂರ್ತಿ.—ಸನ್ಮಾನ್ಯ ಅಧ್ಯಕ್ಷರೇ ಕಡೂರು ತಾಲ್ಲೂಕು ಪಂಚನಹಳ್ಳಿಯಲ್ಲಿ ಯಾವುದೇ ರೀತಿಯ ಹಾಸ್ಟಲ್‌ಗಳು ಇರುವುದಿಲ್ಲ. ಅಲ್ಲಿರತಕ್ಕಂಥ ಕಿರಿಯ ಕಾಲೇಜಿನಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳು ನಡೆಯುತ್ತಿವೆ. ಅಲ್ಲಿಗೆ ಮುಂದೆ ಮೆಟ್ರಿಕ್ ವಿದ್ಯಾರ್ಥಿನಿಲಯವನ್ನು ಮುಂದಿನ ವರ್ಷವಾದರೂ ಸ್ಥಾಪನೆ ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಕಡೂರು ತಾಲ್ಲೂಕಿನಲ್ಲಿ. ಈಗಾಗಲೇ ಸುಮಾರು ೬೮ ಹಾಸ್ಟಲ್‌ಗಳು ಇವೆ. ಆದರಲ್ಲಿ ಳಿಳಿ ಹಾಸ್ಟಲ್‌ಗಳು ಹುಡುಗರಿಗೆ. ಇನ್ನು ಉಳಿದ ೨೪ ಹಾಸ್ಟಲ್‌ಗಳು, ಹೆಂಡುಗಿಯರಿ ಗೆಸಂಬಂದಿಸಿದವು. ಇನ್ನು ಮುಂದೆ ಮೆಟ್ರಿಕ್ ಹಾಸ್ಟಲ್‌ಗಳನ್ನು ತೆರೆಯುವಾಗ ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಅಮೃರ್ತಾ ಯೋಜನೆಯ ಕೆಲಸಕ್ಕಾಗಿ ಹಣ ನೀಡುವ ಕುರಿತು.

೫೪೯. ಶ್ರೀ ಮಾಲಿಕಯ್ಯ ಗುತ್ತೇದಾರ್, (ಅಫಜಲ್‌ಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಅಳಂದ ತಾಲ್ಲೂಕಿನ ಅಮರ್ಜಾ ನೀರಾವರಿ ಯೋಜನೆಯು ಕೆಲಸ ಕಳೆದ ಎರಡು ವರ್ಷಗಳಿಂದ ನಿಂತು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಸರ್ಕಾರದವರು ಈ ಯೋಜನೆಯು ಕಾರ್ಯದಲ್ಲಿ ಸಾಧಿಸಿರುವ ಪ್ರಗತಿ ಹಾಗೂ ಇದಕ್ಕಾಗಿ ಬಿಡುಗಡೆ ಮಾಡಲಾದ ಹಣದ ವಿವರವೆಷ್ಟು ;

ಇ) ಈ ಯೋಜನೆಯನ್ನು ಕಾರ್ಯಗತಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಎಡದಂಡೆ ಮಣ್ಣಿನ ಒಡಿನ ಕೆಲಸ ನಾಲೆಯ ಕೆಲಸಗಳು ಹಾಗೂ ರಸ್ತೆ ನಿರ್ಮಾಣ ಕೆಲಸ ಗಳನ್ನು ಮುಂದುವರಿಸಿರುವುದು. ೧೯೮೩-೮೪ನೇ ಸಾಲಿನಲ್ಲಿ ೬೫ ಲಕ್ಷ ರೂಪಾಯಿಗಳ ಅನುದಾನ ನೀಡಲಾಗಿದ್ದು ೫೬ ಲಕ್ಷ ರೂಪಾಯಿಗಳು ವ್ಯಯವಾಗಿರುತ್ತದೆ ೧೯೮೪-೮೫ನೇ ಸಾಲಿನಲ್ಲಿ ೧೯ ಲಕ್ಷ ರೂಪಾಯಿಗಳ ಅನುದಾನ ನೀಡಲಾಗಿದ್ದು ೨೦ ಲಕ್ಷ ರೂಪಾಯಿಗಳು ವ್ಯಯವಾಗಿರುತ್ತದೆ.

ಇ) ಏಳನೇ ಯೋಜನೆಯಲ್ಲಿ ಹೆಚ್ಚಿನ ಹಣ ಒದಗಿಸುವುದು ಹಾಗೂ ವಿಶ್ವ ಬ್ಯಾಂಕಿನ ನೆರವನ್ನು ಪಡೆಯುವ ಉದ್ದೇಶವಿರುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಅಮರ್‌ಜಾ ಯೋಜನೆಯು ರಿವೈಸ್ಡ್ ಎಸ್ಟಿಮೇಟ್ ಸುಮಾರು ೨೪ ಕೋಟಿ ರೂಪಾಯಿಗಳಾಗುತ್ತದೆ. ಒನೇ ಪಂಚವಾರ್ಷಿಕ ಯೋಜನೆಯಲ್ಲಿ ೧೦ ಕೋಟಿ